2001–2002	65	65	0	0
2002–2003	496	496	0	0
2003–2004	0	0	0	0
2005–2006	40	0	7	33
ಒಟ್ಟು	**737**	**697**	**7**	**33**

ಮಂಜೂರಾದ 737 ಮನೆಗಳಲ್ಲಿ 697 ಮನೆಗಳನ್ನು ಪೂರ್ಣಗೊಳಿಸಿದ್ದು ಉಳಿದ 40 ಮನೆಗಳಲ್ಲಿ 20 ಮನೆಗಳನ್ನು ನಿರ್ಮಿಸಲು ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದ್ದು 7 ಮನೆಗಳು ಪ್ರಗತಿಯಲ್ಲಿದ್ದು ಹಾಗೂ ಉಳಿದ 20 ಮನೆಗಳ ಗುರಿಗೆ ತಕ್ಕಂತೆ ನಿವೇಶನ ರಚಿಸಿ ಮನೆ ನಿರ್ಮಿಸಲು ಜಮೀನಿನ ಆಯ್ಕೆ ಮಾಡಬೇಕಿದೆ.

ಇ) 697 ಮನೆಗಳನ್ನು ಈವರೆಗೆ ನಿರ್ಮಿಸಲಾಗಿದ್ದು ಈ ಪೈಕಿ 243 ಮನೆಗಳನ್ನು ಸ್ವತಃ ಫಲಾನುಭವಿಗಳೇ ನಿರ್ಮಿಸಿಕೊಂಡಿದ್ದು ಇನ್ನುಳಿದ 454 ಮನೆಗಳನ್ನು ಕರ್ನಾಟಕ ಭೂ ಸೇನಾ ನಿಗಮದವರು ನಿರ್ಮಿಸಿರುತ್ತಾರೆ.

ಈ) 2002–03ನೇ ಸಾಲಿನ 454 ಮನೆಗಳನ್ನು ಮಾತ್ರ ಕರ್ನಾಟಕ ಭೂ ಸೇನಾ ನಿಗಮಕ್ಕೆ ನೀಡಲಾಗಿದ್ದು ಉಳಿದ ಸಾಲಿನ ಎಲ್ಲಾ ಮನೆಗಳನ್ನು ಸ್ವತಃ ಫಲಾನುಭವಿಗಳೇ ನಿರ್ಮಿಸಿಕೊಂಡಿರುತ್ತಾರೆ.

ಉ) ಎಲ್ಲಾ ಶ್ರೇಣಿಗಳಿಗೆ ಫಲಾನುಭವಿಗಳನ್ನು ಗುರ್ತಿಸುವ ಕಾರ್ಯ ಮುಗಿದಿರುತ್ತದೆ. 2005–06ನೇ ಸಾಲಿನ ಶ್ರೇಣಿಯಡಿ ನೀಡಲಾಗಿರುವ 20 ಮನೆಗಳ ಗುರಿಯನ್ನು ಮಾರ್ಪಾಡು ಮಾಡಿ 40 ಗುರಿಯಾಗಿ ಪರಿಷ್ಕರಿಸಿದ್ದು ಈ ಪೈಕಿ 20 ಫಲಾನುಭವಿಗಳ ಆಯ್ಕೆ ಕಾರ್ಯ ಮುಗಿದಿದ್ದು ಇನ್ನುಳಿದ 20 ಫಲಾನುಭವಿಗಳಿಗೆ ಮನೆ ನಿರ್ಮಿಸಲು ಜಮೀನಿನ ಆಯ್ಕೆ ಮಾಡಬೇಕಿದೆ.

601 (1164) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ–ಸವಣೂರು ತಾಲ್ಲೂಕುಗಳಲ್ಲಿ ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ನೂತನವಾಗಿ ಪ್ರೌಢ ಶಾಲೆಗಳು ಪ್ರಾರಂಭವಾಗಿದ್ದು, ಈ ಪ್ರೌಢ ಶಾಲೆಗಳಿಗೆ ಸಿಬ್ಬಂದಿ, ಕಟ್ಟಡ ಹಾಗೂ ಡೆಸ್ಕ್‌ಗಳ ಅತೀ ಅವಶ್ಯಕತೆ ಇರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಹಾಗಿದ್ದಲ್ಲಿ ನೂತನವಾಗಿ ಪ್ರಾರಂಭವಾಗಿರುವ ಪ್ರೌಢ ಶಾಲೆಗಳಿಗೆ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿನ ಪ್ರಮಾಣದಲ್ಲಿ ಆಗುತ್ತಿದ್ದು, ಗ್ರಾಮೀಣ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗಾಗಿ ಸಿಬ್ಬಂದಿ, ಕಟ್ಟಡ ಹಾಗೂ ಬೆಂಚುಗಳನ್ನು ಪೂರೈಸಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಸರ್ಕಾರದ ಗಮನದಲ್ಲಿದೆ.

ಆ) ರಾಜ್ಯವಲಯ ಯೋಜನೆಯಡಿಯಲ್ಲಿ 2007–08ನೇ ಸಾಲಿಗೆ ಬಿಡುಗಡೆ ಆಗಿರುವ ಅನುದಾನದಲ್ಲಿ ಪ್ರೌಢ ಶಾಲೆಗಳಿಗೆ ಕಟ್ಟಡ ನಿರ್ಮಿಸಲು ಹಾಗೂ ಡೆಸ್ಕ್‌ಗಳನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನಾವರ್ತಕ ವೆಚ್ಚದಡಿ ಪ್ರತಿ ಶಾಲೆಗೆ ಪಾಠೋಪಕರಣ, ಹಾಗೂ ಸಾದಿಲ್ವಾರಿಗಾಗಿ 1.00 ಲಕ್ಷ ರೂ.ಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಮಾನ್ಯ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದಲೂ ಸರ್ಕಾರಿ ಶಾಲೆಗಳಿಗೆ ಡೆಸ್ಕ್‌ಗಳು, ಕಟ್ಟಡ, ಪಾಠೋಪಕರಣಗಳ ಪೂರೈಕೆ ಮಾಡಲು ಕೋರಲಾಗುತ್ತಿದೆ.

ಸರ್ಕಾರಿ ಪ್ರೌಢಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಆರ್.ಐ.ಡಿ.ಎಫ್–12 ಯೋಜನೆಯಡಿ ಸವಣೂರು ತಾಲ್ಲೂಕಿನ ಇಚ್ಚಂಗಿ ಗ್ರಾಮಕ್ಕೆ ಹಾಗೂ ಶಿಗ್ಗಾಂವ್ ತಾಲ್ಲೂಕಿನ ನೀರಲಗಿ ಗ್ರಾಮಕ್ಕೆ ಸರ್ಕಾರಿ ಪ್ರೌಢ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಈಗಾಗಲೇ ಅನುದಾನ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಯು ಪ್ರಗತಿ ಹಂತದಲ್ಲಿದೆ.

ಆರ್.ಐ.ಡಿ.ಎಫ್ – 13ರ ಯೋಜನೆಯಡಿ ಸವಣೂರು ಸರ್ಕಾರಿ ಪ್ರೌಢಶಾಲೆಗೆ ಹಾಗೂ ಶಿಗ್ಗಾಂವ್ ತಾಲ್ಲೂಕಿನ ಕೋಣನಕೇರಿ ಗ್ರಾಮಕ್ಕೆ ಕೊಠಡಿಗಳ ನಿರ್ಮಾಣಕ್ಕಾಗಿ ಪ್ರಸ್ತಾಪಿಸಲಾಗಿದೆ.

ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಹಾಗೂ ಸಿಬ್ಬಂದಿ ವರ್ಗದವರ ನೇಮಕಾತಿಯನ್ನು ಮಂಜೂರಾದ ಹುದ್ದೆಯನ್ವಯ ನೇರ ನೇಮಕಾತಿ ಹಾಗೂ ಬಡ್ತಿ ಮೂಲಕ ಆದ್ಯತೆ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.